


ಗೋಣಿಕೊಪ್ಪಲುವಿನ ಕಿರುಗೂರಿನ ಚೆಪ್ಪುಡಿರ ಬೋಪಣ್ಣನ ನಾಪತ್ತೆ ಪ್ರಸಂಗವು ಕರಮಚಂದ ಭೇದಿಸಿದ ಕುತೂಹಲಕಾರಿ ಪ್ರಕರಣಗಳಲ್ಲಿ ಒಂದು. ಮಾಯಾಮುಡಿಯಲ್ಲಿ ಪುಟ್ಟ ಹೊಟೇಲು ನಡೆಸುತ್ತಿದ್ದ ಬೋಪಣ್ಣ ಹಠಾತ್ತಾಗಿ ಕಾಣೆಯಾಗಿದ್ದು ಒಂದು ರೋಚಕ ಕತೆ.

ಒಂದು ದಿನ ಬೆಳಿಗ್ಗೆ, ಗೋಣಿಕೊಪ್ಪಲು ಠಾಣೆಯ ವೃತ್ತ ನಿರೀಕ್ಷಕ ವೆಲೈಂಟನ್ ಡಿಸೋಜ ನಮ್ಮಲ್ಲಿಗೆ ಆಗಮಿಸಿದ.

"ಡಿಸೋಜ, ಬನ್ನಿ! ಬೋಪಣ್ಣನ ಪ್ರಕರಣ ಇನ್ನೂ ಬಗೆ ಹರಿದಿಲ್ಲ, ಅಲ್ವೇ?" – ಕರಮಚಂದ ಸ್ವಾಗತಿಸುತ್ತಾ ಹೇಳಿದಾಗ, ಡಿಸೋಜನಿಗೆ ಅಚ್ಚರಿ.

"ಮೊಬೈಲಿನಲ್ಲಿ ಬೋಪಣ್ಣನ ಚಿತ್ರ, ಸುದ್ದಿಯೆಲ್ಲ ಸ್ಟೇಟಸ್ ಹಾಕಿದ್ದೀರಿ. ಆತ ನಾಪತ್ತೆಯಾಗಿ ಆಗಲೇ ನಾಲ್ಕು ದಿನಗಳಾಗಿವೆ. ಆ ವಿಷಯವಾಗಿಯೇ ಬಂದಿರಬೇಕಲ್ವೇ!."

ಕಿರಗೂರಿನ ಬೋಪಣ್ಣ ನಾಪತ್ತೆಯಾಗಿದ್ದು ನಾಲ್ಕು ದಿನಗಳ ಹಿಂದೆ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು.

"ವಿಚಿತ್ರ ಪ್ರಕರಣ. ಆತನ ಮೊಬೈಲು ಸ್ವಿಚ್ ಆಫ್ ಆಗುವಾಗ, ರಾತ್ರಿ ಹತ್ತರ ವೇಳೆಗೆ ಮಡಿಕೇರಿಯ ಟವರ್ ವ್ಯಾಪ್ತಿಯಲ್ಲಿತ್ತು. ಆತ ಆ ದಿನ ಸಂಜೆಯೇ ಆರು ಗಂಟೆಗೆ ಹೊಟೇಲಿನಿಂದ ನಡೆದುಕೊಂಡು ಹೊರಟವನು ಮನೆಗೆ ಹೋಗಿಲ್ಲ. ಮಧ್ಯಾಹ್ನ ಮನೆಯಿಂದ ಸ್ಕೂಟರಿನಲ್ಲಿ ಬಂದಿದ್ದ. ಆತನಿಗೆ ಸಾಲ–ಗೀಲ, ಅಥವಾ ವ್ಯವಹಾರದಲ್ಲಿ ನಷ್ಟದಂತಹ ಸಮಸ್ಯೆಗಳೇನೂ ಇರಲಿಲ್ಲ. ಅವ್ನ ಹೆಂಡ್ತಿ ಕುಮುದ ಕುಶಾಲನಗರದ ಖಾಸಗಿ ಶಾಲೆಯಲ್ಲಿ ಟೀಚರ್. ಪ್ರತೀ ಶನಿವಾರ ಮನೆಗೆ ಬರ್ತಾಳಂತೆ. ಅವ್ನು ಕಾಣೆಯಾಗಿದ್ದು ಮೊನ್ನೆ ಶನಿವಾರವೇ. ದಂಪತಿಗೆ ಮಕ್ಕಳಿಲ್ಲ. ಮೊಬೈಲು ಇನ್ನೂ ಸ್ವಿಚ್ ಆಫ್ ಆಗಿದೆ. ಕುಮುದ ನಿತ್ಯ ಫೋನು ಮಾಡಿ ಅಳ್ತಾಳೆ. ನಿಮ್ಮಿಂದ ಏನಾದರೂ ಮಾಡೋಕಾಗುತ್ತಾ ಅಂತ."

ಡಿಸೋಜ ಜೇಬಿನಿಂದ ಒಂದು ಲಕೋಟೆ ತೆಗೆದು, ಅದರೊಳಗಿನಿಂದ ಒಂದು ಕಾಗದವನ್ನು ನಮ್ಮೆದುರು ಹಿಡಿದ. ಅದರಲ್ಲಿ ನೀಲಿ ಬಣ್ಣದ ಅಕ್ಷರಗಳಲ್ಲಿ ಹೀಗೆ ಬರಹವಿತ್ತು. 'ಈ ರಾತ್ರಿ ಎಂಟು ಗಂಟೆಗೆ ಅದೇ ಜಾಗಕ್ಕೆ ಬಾ.'

"ಈ ಲಕೋಟೆ ಹೊಟೇಲಿನ ಗಲ್ಲಾ ಪಟ್ಟಿಗೆಯ ಡ್ರಾಯರ್‌ನಲ್ಲಿ ಸಿಕ್ಕಿತು."

ಡಿಸೋಜ ವಿವರಣೆ ನೀಡಿದ. ರಾತ್ರಿ ತಡವಾದರೂ ಆತ ಮನೆಗೆ ಬರದಿದ್ದಾಗ, ವಿಚಾರಿಸಲು ಕುಮುದ ಆತನಿಗೆ ಫೋನು ಮಾಡಿದ್ರೆ, ಆತ ಕರೆ ಸ್ವೀಕರಿಸಲಿಲ್ಲವಂತೆ. ಹೊಟೆಲಿಗೆ ಫೋನು ಮಾಡಿದಾಗ, ಆತ ಆರು ಗಂಟೆಗೇ ಹೋಗಿದ್ದಾನೆ ಅಂತಂದರಂತೆ. ರಾತ್ರಿಯಿಡೀ ಆತ ಬರಬಹುದೆಂದು ಕಾದು, ಮರುದಿನ ಆಕೆ ಪೊಲೀಸ್ ಠಾಣೆಯಲ್ಲಿ ದೂರಿತ್ತಳಂತೆ.

ಅದನ್ನು ಕೂಲಂಕಷವಾಗಿ ಪರಿಶೀಲಿಸಿದ ಕರಮಚಂದ. ಅತ್ಯಂತ ವಿಕಾರವಾದ ಬರಹವದು.

"ಬಿದ್ದಪ್ಪ, ನಿನಗೇನಾದರೂ ಊಹಿಸಲಿಕ್ಕೆ ಸಾಧ್ಯವಿದೆಯೇ?" ಕರಮಚಂದ ನನ್ನಲ್ಲಿ ವಿಚಾರಿಸಿದ.

"ಹೆಚ್ಚೇನೂ ಗೊತ್ತಾಗದು. ಬರೆದವನು ಹೆಚ್ಚು ಕಲಿತಿರಲಿಕ್ಕಿಲ್ಲ."

"ತಪ್ಪು! ಇದು ಬರೆದವನ ಸಹಜ ಬರವಣಿಗೆಯಲ್ಲ. ನೋಡು, ಟ ಅಕ್ಷರವು ಎರಡು ಬಾರಿ ಇದೆ. ಆದರೆ ಎರಡೂ ಬೇರೆ ಬೇರೆ ಮೋಡಿಯಲ್ಲಿದೆ. ಅದರ ಅರ್ಥವೇನು? ಇದು ಕೃತಕವಾದ ಬರಹ. ಸಹಜವಾಗಿದ್ದರೆ, ಒಂದೇ ಬಗೆಯಲ್ಲಿ ಇರಬೇಕಿತ್ತು. ಹಾಗಿದ್ದರೆ, ಇದರ ಉದ್ದೇಶ ಏನು? ತನ್ನ ಕೈಬರಹವು ಗೊತ್ತಾಗಬಾರದು ಎನ್ನುವುದು. ಯಾಕೆ?"

"ಪ್ರಾಯಶಃ ಬರೆದವನ ಪರಿಚಯ ಬೋಪಣ್ಣನಿಗೆ ಇರಬೇಕು!"

"ಎರಡು ಸಾಧ್ಯತೆ. ಬೋಪಣ್ಣನಿಗೆ ಯಾರೆಂದು ಗೊತ್ತಾಗಿದೆ. ಅದಕ್ಕೇ ಪರಾರಿಯಾಗಿದ್ದಾನೆ. ಇಲ್ಲ, ಕಾಗದದಲ್ಲಿ ಹೇಳಿದ ಜಾಗಕ್ಕೆ ಬೋಪಣ್ಣ ಹೋಗಿದ್ದಾನೆ. ಆಮೇಲೆ ಏನಾದರೂ ಅನರ್ಥ ಸಂಭವಿಸಿರಲೂಬಹುದು. ಇದನ್ನು ಬರೆದಾತ, ಮುಂದೆ ತನ್ನ ವಿರುದ್ಧ ಬರಹ ಸಾಕ್ಷ್ಯವಾಗಬಾರದೆನ್ನುವ ಉದ್ದೇಶದಿಂದ ಕೈಬರಹ ಬದಲಾಯಿಸಿರಬಹುದು!"

ಡಿಸೋಜ ತನ್ನ ತನಿಖೆಯ ಕುರಿತು ಒಂದಿಷ್ಟು ಮಾಹಿತಿ ನೀಡಿದ. ಕುಮುದಳ ಹೇಳಿಕೆಯಂತೆ ಅವರಿಗೆ ಶತ್ರುಗಳ್ಯಾರೂ ಇಲ್ಲ. ಹೋಟೆಲಿನ ಉದ್ಯೋಗಿಗಳಲ್ಲಿ ವಿಚಾರಿಸಿದಾಗ, ಎರಡು ದಿನಗಳ ಮೊದಲು, ಅಂದರೆ ಗುರುವಾರ, ರಾತ್ರಿ ಒಂದು ವಿಚಿತ್ರವಾದ ಸಂಗತಿ ಘಟಿಸಿತ್ತು ಅಂತ ನೌಕರನೊಬ್ಬ ಹೇಳಿದನಂತೆ. ಆ ದಿವಸ, ಸಂಜೆ ಎಂಟರ ಹೊತ್ತಿಗೆ, ಒಬ್ಬ ಅಪರಿಚಿತ ಹೋಟೆಲಿಗೆ ಆಗಮಿಸಿದನಂತೆ. ಗಡ್ಡಧಾರಿಯಾದ ಆತ ನೇರವಾಗಿ ಗಲ್ಲಾಪೆಟ್ಟಿಗೆಯತ್ತ ಹೆಜ್ಜೆ ಹಾಕಿ, ಬೋಪಣ್ಣನೊಡನೆ ಸಂಭಾಷಣೆಗೆ ತೊಡಗಿದನಂತೆ. ಸುಮಾರು ಹತ್ತು ನಿಮಿಷ ಮಾತುಕತೆ ನಡೆಸಿದ ನಂತರ, ಇಬ್ಬರೂ ಲಗುಬಗೆಯಿಂದ ಹೊರಗೆ ಹೋದರಂತೆ. ಹತ್ತು ನಿಮಿಷದಲ್ಲಿ ಬೋಪಣ್ಣ ಒಬ್ಬನೇ ಹಿಂದಿರುಗಿದನಂತೆ. ಆ ವ್ಯಕ್ತಿ ಬೋಪಣ್ಣನಿಗೆ ಪರಿಚಿತನಿರಬೇಕು ಅಂತ ಅನ್ನಿಸಿತಂತೆ. ಆಮೇಲೆ ಇನ್ನೂ ಒಂದು ವಿಚಿತ್ರವಾದ ಘಟನೆ ಸಂಭವಿಸಿತಂತೆ. ಸುಮಾರು ಒಂಬತ್ತರ ಹೊತ್ತಿಗೆ ಇನ್ನಿಬ್ಬರು ಅಪರಿಚಿತರು ಆಗಮಿಸಿದರಂತೆ. ಅವರಿಬ್ಬರು ಪ್ರಥಮ ಬಾರಿಗೆ ಹೋಟೆಲಿಗೆ ಆಗಮಿಸಿದ್ದು ಅಂತ ಆ ನೌಕರ ಖಂಡಿತವಾಗಿ ಹೇಳ್ತಾನೆ. ಅವರಲ್ಲಿ ಒಬ್ಬಾತ, ಬೋಪಣ್ಣನಲ್ಲಿ ಹೋಗಿ ಏನೋ ವಿಚಾರಿಸಿದನಂತೆ. ಆಮೇಲೆ ಅವರಿಬ್ಬರೂ ತಿಂಡಿ ಆರ್ಡರ್ ಮಾಡಿ, ಕುಳಿತರಂತೆ. ಆದರೂ ಅವರಿಬ್ಬರೂ ಯಾರನ್ನೋ ಹುಡುಕುವಂತೆ ಅತ್ತ ಇತ್ತ ಕತ್ತು ಹೊರಳಿಸುತ್ತಿದ್ದರಂತೆ. ತುಸು ಹೊತ್ತಿನಲ್ಲಿ, ಅವರಲ್ಲೊಬ್ಬ ಎದ್ದು, ನೇರವಾಗಿ ಕಿಚನ್‌ಗೆ ನುಗ್ಗಿದನಂತೆ. ಏನು ಬೇಕು ಅಂತ ವಿಚಾರಿಸಿದ್ದಕ್ಕೆ, ಉತ್ತರಿಸದೇ ಅಲ್ಲಿ ಹುಡುಕಾಡಿ, ನಂತರ ಹೋಟೆಲಿನ ಹಿಂಭಾಗಕ್ಕೆ ಹೋದನಂತೆ. ಆಮೇಲೆ ಅವ್ನು ಕೈಯ ಬೆರಳು ತೋರಿ, ಟಾಯ್ಲೆಟ್ ಎಲ್ಲಿ ಅಂತ ವಿಚಾರಿಸಿದನಂತೆ. ಅವ್ನು ಕಿವುಡ ಇರಬೇಕು ಅಂತ ನೌಕರನ ಹೇಳಿಕೆ. ಆದರೆ ತಮಾಷೆಯೆಂದರೆ, ಅವ್ನು ಮೊದಲು ಕೈತೊಳೆದ ಜಾಗದಲ್ಲೇ ಟಾಯ್ಲೆಟ್ ಇದ್ದದ್ದನ್ನು ಆತ ಗಮನಿಸಲಿಲ್ಲ ಯಾಕೆ ಎನ್ನುವುದು. ನೌಕರರ ಹೇಳಿಕೆಯಂತೆ ಅವರಿಬ್ಬರೂ